INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -4, November-December, 2022,
Page No,87- 92
Peer Reviewed Journal, Referred Journal

# ಮಧುಗಿರಿ ಮಹಾನಾಡು ಪ್ರದೇಶದ ಚಾರಿತ್ರಿಕ ಹಿನ್ನೆಲೆ

* ಜಗನ್ನಾಥ ಬಿ.ಈ.[1]
** ಡಾ.ಕೆ.ಎಲ್.ಎನ್.ಮೂರ್ತಿ[2]

ತುಮಕೂರು ಜಿಲ್ಲೆಯ ತಾಲ್ಲೂಕುಗಳಲ್ಲಿ ಒಂದಾದ ಮಧುಗಿರಿ ಐತಿಹಾಸಿಕವಾಗಿ, ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿಯೂ ತನ್ನದೇ ಆದ ಮಹತ್ವವನ್ನು ಪಡೆದಿರುವ ಒಂದು ತಾಲ್ಲೂಕು ಕೇಂದ್ರವಾಗಿದೆ.[1] ಇದರ ಪೂರ್ವ ಹೆಸರು (ಮೊದಲ ಹೆಸರು) ಮದ್ದಗಿರಿ, ಮಧು ಎಂಬ ಹೆಸರಿನ ಎತ್ತರದ ಬುಡದಲ್ಲಿ ಈ ಊರು ಇದ್ದುದರಿಂದಲೇ ಮದ್ದಗಿರಿ ಎಂಬುದಾಗಿ ಹಾಗೂ ಮಧು ಎಂದರೆ ಜೇನು ಮತ್ತು ಗಿರಿ ಎಂದರೆ ಬೆಟ್ಟ ಹೀಗಾಗಿ ಅದಕ್ಕೆ ಮಧುಗಿರಿ ಎಂಬ ಹೆಸರು ಬಂದಿತಂತೆ ಐತಿಹ್ಯ ಕಥೆಗಳಿವೆ. ಇದನ್ನು ದಾಳಿಂಬೆ ಪಟ್ಟಣವೆಂತಲೂ ಕರೆಯಲಾಗುತ್ತಿತ್ತು. 1927 ರಿಂದ ಮಧುಗಿರಿ ಎಂಬ ಹೆಸರು ರೂಢಿಗೆ ಬಂದಿತ್ತೆಂದೂ ಹೇಳಿಕೆಗಳಿವೆ.[2]

ಈ ಮಧುಗಿರಿಯನ್ನು ಮಹಾನಾಡು ಪ್ರಭುಗಳು ಆಳ್ವಿಕೆ ನಡೆಸಿದ್ದಾರೆ. ಇವರು ತುಮಕೂರು ಜಿಲ್ಲೆಯ ಮಧುಗಿರಿ, ಕೊರಟಗೆರೆ ಅಲ್ಲದೆ ಆಂಧ್ರಪ್ರದೇಶದ ಮಡಕಶಿರ ತಾಲ್ಲೂಕುಗಳ ಸಾಕಷ್ಟು ಭೂಭಾಗಗಳನ್ನು ಆಳುತ್ತಿದ್ದರೆಂದೂ ಹಾಗೂ ಆಳ್ವಿಕೆಯನ್ನು ನಡೆಸಿರುವ ಹಿನ್ನೆಲೆಯಲ್ಲಿ ಈ ಭಾಗದ ಪ್ರಮುಖ ಸ್ಥಾನಿಕ ಪ್ರಭುಗಳಾಗಿದ್ದಾರೆ. ಮಧುಗಿರಿ ಭಾಗದ ಈ ಮಹಾನಾಡು ಸಂಸ್ಥಾನವು ಪ್ರಾಯಶಃ ಕ್ರಿ.ಶ.5ನೇ ಶತಮಾನದ ಪ್ರಾರಂಭದಲ್ಲಿಯೇ ಏಳಿಗೆಗೆ ಬಂದಿತ್ತೆಂದು ಹೇಳಿಕೆಗಳಿವೆ. ಈ ಮಧುಗಿರಿ ಶಿಲಾಯುಗದ ಸಂಸ್ಕೃತಿಯಿಂದ ಹಿಡಿದು ಚಾರಿತ್ರಿಕ ಕಾಲದವರೆವಿಗೂ ಈ ಪ್ರದೇಶವೂ ತನ್ನದೇ ಆದ ಸನಾತನ ಸಾಂಸ್ಕೃತಿಕ ನೆಲೆಗಟ್ಟನ್ನು ಪಡೆದುಕೊಂಡಿದೆ. ಈ ಪ್ರದೇಶದಲ್ಲಿ ಹಳೆಶಿಲಾಯುಗ, ಸೂಕ್ಷ್ಮ ಶಿಲಾಯುಗ, ನೂತನಶಿಲಾಯುಗ, ತಾಮ್ರಶಿಲಾಯುಗ, ಬೃಹತ್ ಶಿಲಾಯುಗಕ್ಕೆ ಸೇರಿದ ಹಲವಾರು ನೆಲೆಗಳನ್ನು ಹಿರಿಯ ವಿದ್ವಾಂಸರು ಪತ್ತೆ ಹಚ್ಚಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಅದರಲ್ಲೂ ಕತ್ತಿರಾಜನಹಳ್ಳಿ, ಕಲ್ಲೇನಹಳ್ಳಿ, ಕೊಡಿಗೇನಹಳ್ಳಿ, ಗುಟ್ಟೆ, ಗುರಮ್ಮನ ಕಟ್ಟೆ, ಚಿಕ್ಕಗೌಡನಕೊಪ್ಪ, ದಬ್ಬೆಗಟ್ಟ, ಬಿಜ್ಜವಾರ, ಸಿದ್ದಾಪುರ

---

1.ಸಂಶೋಧಕರು, ಸಹಾಯಕಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಾಣಿ ಸಕ್ಕರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಯೂರು, ಚಿತ್ರದುರ್ಗ.

2.ಪ್ರಾಧ್ಯಾಪಕರು,ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ಸಂಶೋಧನಾ ವಿಭಾಗ,ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

ಮತ್ತು ಮಧುಗಿರಿಗಳಲ್ಲಿ ಶಿಲಾಸಂಸ್ಕೃತಿಗೆ ಸೇರಿದ ವಿವಿಧ ಬಗೆಯ ಉಪಕರಣಗಳಾದ ಕೈಗೊಡಲಿ, ಮಚ್ಚುಗತ್ತಿ, ಚಕ್ರಾಕಾರದ ಉಪಕರಣಗಳು, ಸೀಳುಗತ್ತಿ, ಅಲುಗಿನ ಉಪಕರಣಗಳು, ನೀಳಚಕ್ಕೆ, ಹರೆಚಕ್ಕೆ ಮೊದಲಾದ ಉಪಕರಣಗಳು ಕಲ್ಲುಚಪ್ಪಡಿ ಹಾಗೂ ಶಿಲಾಗೋರಿಗಳನ್ನು ಪತ್ತೆಹಚ್ಚಲಾಗಿದೆ.[3] ಈ ಬೆಳವಣಿಗೆಯಿಂದ ಈ ಪ್ರದೇಶವೂ ಸಹ ಒಂದು ಪ್ರಬುದ್ಧ ಮಾನವನ ವಾಸ್ತವ್ಯದ ಕ್ಷೇತ್ರವಾಗಿದ್ದಿತೆಂದೂ ತಿಳಿಯಬಹುದಾಗಿದೆ.

ಮಧುಗಿರಿ ನಾಡಿನದ್ಯಂತ ಪ್ರಚಲಿತವಿರುವ ಬೆಟ್ಟಗುಡ್ಡಗಳು, ಗವಿಗಳು, ನದಿ, ಕೆರೆ, ಊರುಗಳಿಂದಲೂ ಪ್ರಸಿದ್ಧವಾಗಿದೆ. ಸ್ಥಳಪುರಾಣಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಪ್ರಸಿದ್ಧ ಪುರಾಣ ಕಥೆಗಳು ಜನಜನಿತವಾಗಿರುವುದು ಕಂಡುಬರುತ್ತದೆ. ಮಧುಗಿರಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಲವಾರು ಭಕ್ತರ ಸಿದ್ಧಪುರುಷರ ಮಠಗಳಿವೆ. ಅವುಗಳಲ್ಲಿ ವಿರಕ್ತ ಮಠಗಳು ಸಿದ್ಧ ತಪಸ್ಸಿನ ಗುಹೆಗಳು ಮತ್ತು ಸ್ಮಾರಕಗಳು ಪೌರಾಣಿಕ ಮತ್ತು ಚಾರಿತ್ರಿಕ ಘಟನೆಗಳನ್ನು ತಿಳಿಸುವುದರೊಂದಿಗೆ ಸನಾತನ ಸಾಂಕೃತಿಕ ನೆಲೆಗಟ್ಟನ್ನು ಗಮನಿಸಬಹುದಾಗಿದೆ. ಶ್ರೀರಾಮಚಂದ್ರನು ಕಡಬ ಕೆರೆಯನ್ನು ನಿರ್ಮಿಸಿದನೆಂದು, ಕದಂಬ ಕ್ಷೇತ್ರವೆಂದು ಪ್ರಸಿದ್ಧವಾದ ಕಡಬ ಕೆರೆಯ ಸುತ್ತಮುತ್ತಲಿನ ಪ್ರದೇಶದ ಸ್ಥಳಪುರಾಣದಿಂದ ತಿಳಿದುಬರುತ್ತದೆ. ಕ್ರಿ.ಶ.1450 ರ ತೆಲುಗು ಶಾಸನದ ಪ್ರಕಾರ ಏಳುಸುತ್ತಿನ ಕೋಟೆಯನ್ನು ಪಾಂಡವ ರಾಜಕುಮಾರ ಧರ್ಮರಾಯ ತಮ್ಮ ಅರ್ಜುನ ಮಗ ಅಭಿಮನ್ಯು, ಸಹದೇವ, ನಕುಲ, ಭೀಮನಿಂದ ನಿರ್ಮಿತವಗಿದೆ ಎಂದು ತಿಳಿಸುತ್ತದೆ.[4] ಇಂದಿನ ಇಟ್ಟಿಗ ದಿಬ್ಬನಹಳ್ಳಿ ಹತ್ತಿರವಿರುವ ಬೇಚಿರಕ್ ಗ್ರಾಮದಲ್ಲಿ ಅಳಿದುಳಿದ ಊರು ಮತ್ತು ಕೋಟೆಯ ಅವಶೇಷಗಳನ್ನು ಪಾಂಡವರು ನಿರ್ಮಿಸಿದ ಏಳುಸುತ್ತಿನ ಕೋಟೆ ಎಂಬ ಪ್ರತೀತಿ ಇದೆ. ಮಿಡಿಗೇಶಿ ಸಮೀಪದ ಕತ್ತಿರಾಜನ ಹಳ್ಳಿಯ ಬೆಟ್ಟದಲ್ಲಿನ ಬಂಡೆಗಳನ್ನು ಕುಂತಿಬಂಡೆ ಮತ್ತು ಭೀಮನ ಬಂಡೆಗಳೆಂದು ಕರೆಯುತ್ತಾರೆ. ಪ್ರಚಲಿತವಿರುವ ಇಂತಹ ಎಷ್ಟೋ ಪ್ರತೀತಿ ಇದೆ ಮತ್ತು ನಂಬಿಕೆಗಳು ರಾಮಾಯಣ ಮತ್ತು ಮಹಾಭಾರತದೊಂದಿಗೆ ಬೆಸೆದುಕೊಂಡಿದೆ. ಇಂತಹ ಪರಂಪರಾನುಗತ ನಂಬಿಕೆಗಳ ಸತ್ಯಾಸತ್ಯತೆಯನ್ನು ವಿಶ್ಲೇಷಿಸಲು ಆಧಾರಗಳಿಲ್ಲ. ಆದರೂ ಭೂಭಾಗಕ್ಕೆ ಪ್ರಾಚೀನ ಪೌರಾಣಿಕ ಪರಂಪರೆಯ ಹಿನ್ನೆಲೆ ಇರುವುದು ತಿಳಿದುಬರುತ್ತದೆ. ಮಹಾನಾಡಿನ ಸ್ಥಳೀಯ ಇತಿಹಾಸಕ್ಕೆ ಬರುವುದಾದರೆ, ಮಹಾನಾಡಿನ ಪ್ರಭುಗಳು ಮಹಾನಾಡನ್ನು ಸ್ಥಾಪಿಸುವ ಹಿಂದೆಯೇ ಈ ಪ್ರಾಂತ್ಯವೂ ಹಲವಾರು ಪ್ರಮುಖ ರಾಜಮನೆತನಗಳು ಆಡಳಿತ ನಡೆಸಿರುವ ಕುರಿತು ಸಾಕಷ್ಟು ದಾಖಲೆಗಳಿವೆ. ಉದಾಹರಣೆಗೆ ಕ್ರಿ.ಶ.482 ರ ಕಾಲಕ್ಕೆ ಸೇರಿದ ಮಧುಗಿರಿ ತಾಲ್ಲೂಕಿನ ಕಡಗತ್ತೂರಿನಲ್ಲಿ ದೊರೆತಿರುವ ಶಾಸನವು ಈ ಭಾಗದ ಇತಿಹಾಸಕ್ಕೆ ಪುಷ್ಠಿ ನೀಡುತ್ತದೆ. ಈ ನೆಲೆಯೂ ವೈಷ್ಣವ ಧರ್ಮದವರಿಗೆ ದಾನ ನೀಡಿದ ಪ್ರಾಚೀನ ಶಾಸನವೂ ಸಹ ಆಗಿದೆ. ಕ್ರಿ.ಶ.482 ಕ್ಕಿಂತ ಹಿಂದಿನ ಇತಿಹಾಸದ

ಬಗ್ಗೆ ಮಾಹಿತಿಗಳು ಸದ್ಯಕ್ಕೆ ದೊರೆತಿಲ್ಲ. ಆದರೆ ಈ ಭಾಗಗಳಲ್ಲಿ ದೊರೆತ ಶಾಸನಗಳಲ್ಲಿ ಗಂಗರ ಶಾಸನಗಳೇ ಪ್ರಾಚೀನ ಶಾಸನಗಳಾಗಿವೆ. ಆದಕಾರಣ ಗಂಗರ ಪ್ರಮುಖ ದೊರೆಯಾದ ದುರ್ವಿನೀತನ ಕಾಲಕ್ಕಾಗಲೇ ಈ ಭಾಗವು ಗಂಗರ ಆಡಳಿತಕ್ಕೆ ಸೇರಿತ್ತೆಂದು ತಿಳಿಯಬಹುದಾಗಿದೆ. ಅದು ಅಲ್ಲದೆ ಪ್ರಸಿದ್ಧ ಗಂಗ ದೊರೆಯಾದ ಶಿವಮಾರ, ಶ್ರೀಪುರ ಹಾಗೂ ಯರೆಯಂಗರ ಹಲವಾರು ಶಿಲಾಶಾಸನಗಳು ಈ ಭಾಗದಲ್ಲಿ ದೊರೆತಿವೆ. ಕ್ರಿ.ಶ.906ರ ಕಾಲಕ್ಕೆ ಗಂಗರ ಶಾಸನದಲ್ಲಿ ಮೊದಲಬಾರಿ ಮಿಡಿಗೇಶಿಯ ಉಲ್ಲೆಖ ಶಾಸನೋಕ್ತವಾಗಿ ಕಂಡುಬರುತ್ತದೆ. ಮಧುಗಿರಿ ತಾಲ್ಲೂಕಿನ ಶ್ರವಣ ಗುಡಿಯಲ್ಲಿ ಹತ್ತು ಶಾಸನಗಳು ದೊರಕಿವೆ. ಈ ಹತ್ತು ಶಾಸನಗಳು ಸಹ ವೀರಗಲ್ಲು ಶಾಸನಗಳಾಗಿವೆ. ಕಾರಣವೇನೆಂದರೆ (ಗಂಗರಿಗೂ – ರಾಷ್ಟ್ರಕೂಟರಿಗೂ) (ಗಂಗರಿಗೂ – ಚೋಳರಿಗೂ) ಮತ್ತು (ಗಂಗರಿಗೂ – ನೊಳಂಬರಿಗೂ ನಡೆದ ಯುದ್ದಗಳ ಬಗ್ಗೆ ತಿಳಿದುಬರುತ್ತದೆ. ಅವುಗಳಲ್ಲಿ ಪ್ರಮುಖವಾಗಿ ಶ್ರವಣ ಗುಡಿಯ ಶಾಸನದ ಪ್ರಕಾರ ಗಂಗರ ದೊರೆಯಾದ ಶ್ರೀಪುರುಷನು ರಾಜ್ಯ ಗಂಗವಾಡಿಯ ಮೇಲೆ ರಾಷ್ಟ್ರಕೂಟರು ದಂಡೆತ್ತಿ ಬರುತ್ತಾರೆ. ಈ ಯುದ್ಧದಲ್ಲಿ ಜಡಿಯು ಮುತ್ತರಸನೆಂಬ ವೀರ ಹೋರಾಡಿ ಮಡಿಯುತ್ತಾನೆಂದು ತಿಳಿದುಬರುತ್ತದೆ.[5] ಅಲ್ಲದೆ ಹಿರೇಗುಂಡುಗಲ್ಲಿನ ವೀರಗಲ್ಲಿನ ಶಾಸನವು ಗಂಗರ ಶಿವಮಾರನು ರಾಷ್ಟ್ರಕೂಟರ ಮೂರನೇ ಗೋವಿಂದನ ವಿರುದ್ಧ ಕಾಗೆಮೊಗೆಯೂರಿನಲ್ಲಿ ಹೋರಾಟವನ್ನು ನಡೆಸಿದ್ದಾನೆ.[6]

ಕ್ರಿ.ಶ.750 ರ ನಂತರ ನೊಳಂಬವಾಡಿ, 32000 ರಾಜ್ಯಕ್ಕೆ ಹೆಂಜೇರನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತವನ್ನು ನಡೆಸಿರುವ ನೊಳಂಬರಿಗೆ ಮಧುಗಿರಿಯ ಸುತ್ತಮುತ್ತಲ ಪ್ರದೇಶಗಳು ಬಹುತೇಕ ಸೇರ್ಪಡೆಯಾಗಿತ್ತೆಂದು ತಿಳಿದುಬರುತ್ತದೆ. ಕ್ರಿ.ಶ.940ರ ಶಾಸನದ ಪ್ರಕಾರ ನೊಳಂಬರಾಜ ನುಲಿಪ್ಪಯ್ಯನ ಮಗ ಅಂಕಯ್ಯನ ಆಜ್ಞೆಯಂತೆ ಬಿದನೂರಲ್ಲಿ ತುಂಬೆಪಾಡಿಯ ಗುಡ್ಡಯ್ಯನ ಮಗ ಪೊನ್ನಿಗನು ಬೂತುಗನ ಜೊತೆಯಲ್ಲಿ ಕಾದಾಡಿ ಮಡಿಯುತ್ತಾನೆ.[7] ಈ ಬೂತುಗನು ಬೇಗೂರಿನ ವೀರಗಲ್ಲು ಶಾಸನದ ಬೂತುಗನೇ ಆಗಿದ್ದಾನೆಂದು ತಿಳಿಯಬಹುದಾಗಿದೆ. ಮಧುಗಿರಿ ತಾಲ್ಲೂಕಿನ ಕೊಡ್ಲಾಪುರದಲ್ಲಿ ದೊರೆತ ಶಾಸನವು ನೊಳಂಬಾಡಿ ರಾಜನುಲಿಯಪ್ಪಯ್ಯನು ಮಾಡಿದ ದಾನದ ವಿಚಾರವಿದೆ.[8] ಇನ್ನೊಂದು ವೀರಗಲ್ಲು ಪ್ರಕಾರ ನೊಳಂಬರಾಜ ಇರಿವ ನೊಳಂಬನ ಆಡಳಿತದಲ್ಲಿ ತೊರಯ್ಯನ ಮಗ ಮಂಗಯ್ಯಮನು ಬೂತುಗನೊಂದಿಗೆ ಆನೆ ಕಾಳಗದಲ್ಲಿ ಹೋರಾಡಿ ವೀರ ಸ್ವರ್ಗಕ್ಕೆ ಸಂದನೆಂದು ವಿವರಿಸುತ್ತದೆ.[9] ನೊಳಂಬಾದಿರಾಜ ನನ್ನಿಗನು ಕೊತ್ತಂಗಲದಲ್ಲಿ ಗಂಗರ ಜೊತೆ ಕಾದಾಡುವಾಗ ಭೀಮಯ್ಯನ ಮಗನಾದ ಪೆರ್ಗಡೆ ಬೆಣೆಯ್ಯನು ಗಂಗರ ಆನೆ ನೆತ್ತಿಯ ಸ್ಥಳಕ್ಕೆ ತನ್ನ ಕುದುರೆಯನ್ನು ಹಾರಿಸಿ ಮಡಿಯುತ್ತಾನೆಂದು ಕಲಿದೇವಪುರದ ಶಾಸನದಿಂದ ತಿಳಿದುಬರುತ್ತದೆ.[10] ನೊಳಂಬಾದಿರಾಜ ದಿಲೀಪಯ್ಯ ಪೊನ್ನೇರ ಮುಂತಾದ ನೊಳಂಬ ರಾಜರ ಉಲ್ಲೇಖಗಳು ಹಲವಾರು

ಶಿಲಾ ಶಾಸನಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಆದಕಾರಣ ಈ ಭಾಗದ ಶಾಸನಗಳನ್ನು ಗಮನಿಸಿದಾಗ ಪ್ರದೇಶವು ನೊಳಂಬರ ಪ್ರಮುಖ ಆಡಳಿತ ಪ್ರದೇಶ ಮತ್ತು ಯುದ್ಧ ಭೂಮಿಯೂ ಆಗಿತ್ತೆಂದು ತಿಳಿಯಲಾಗಿದೆ. ನೊಳಂಬರ ಕಾಲದ ವೀರಗಲ್ಲು ಶಿಲ್ಪಗಳು ಶಿಲ್ಪಕಲೆಯ ದೃಷ್ಟಿಯಿಂದ ತುಂಬಾನೇ ಸೊಗಸಾಗಿದೆ. ಅದು ಅಲ್ಲದೆ ಈ ಶಿಲ್ಪಗಳು ಅಂದಿನ ಕಾಲದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಒಂದು ಉತ್ತಮ ಕೃತಿಯಾಗಿದೆ ಎನ್ನಬಹುದು. ನೊಳಂಬರ ನಂತರ ನಿಡುಗಲ್ಲು ಮತ್ತು ಗೋವಿಂದವಾಡಿಗಳನ್ನು ಪ್ರಮುಖ ಕೇಂದ್ರವಾಗಿಸಿಕೊಂಡು ಆಡಳಿತ ನಡೆಸಿದ ಚೋಳರಿಗೆ ಮಿಡಿಗೇಶಿ, ಶ್ರವಣಗುಡಿ, ಬೇಡತ್ತೂರು ಮೊದಲಾದ ಪ್ರಾಂತ್ಯಗಳು ಸೇರಿಕೊಂಡಿದ್ದವು.

ಅಲ್ಲದೆ ಈತನು ಮಾಡಿದ ಯುದ್ಧಗಳ ಬಗ್ಗೆ ಶ್ರವಣಗುಡಿ ವೀರಗಲ್ಲು ಶಾಸನದಿಂದ ತಿಳಿದುಬರುತ್ತದೆ.[11] ಮಧುಗಿರಿ ಸಮೀಪ ಇರುವಂತಹ ಚೋಳರಾಯನ ಕೆರೆ ಹಾಗೂ ಚೋಳೇಶ್ವರ ದೇವಸ್ಥಾನಗಳು ಎರಡನೇ ರಾಜೇಂದ್ರ ಚೋಳನಿಂದ ಕಟ್ಟಲ್ಪಟ್ಟಿತ್ತೆಂದೂ ಹೇಳಿಕೆಗಳಿವೆ. ಚೋಳರ ನಿತ್ಯ ಮನೋಹರ ಉಲ್ಲೇಖವು ಶ್ರಾವುಂಡನಹಳ್ಳಿಯ ಶಾಸನ ಪಾಠದಿಂದ ವ್ಯಕ್ತವಾಗುತ್ತದೆ. ಹೀಗೆ ಚೋಳರ ಆಡಳಿತವೂ ಈ ಭಾಗದಲ್ಲಿ ಕುರುಹುಗಳಾಗಿ ಅವರ ಕಾಲದಲ್ಲಿ ನಿರ್ಮಾಣಗೊಂಡ ಕೆರೆ, ಕಾಲುವೆ ಮತ್ತು ದೇವಾಲಯಗಳು ನಮ್ಮ ಕಣ್ಣ ಮುಂದೆ ನಿಂತಿವೆ.[12] ತುಮಕೂರು ಜಿಲ್ಲೆಯಾದ್ಯಂತ ದೊರೆತಿರುವ ಶಾಸನಗಳಲ್ಲಿ ಹೆಚ್ಚಿನ ಶಾಸನಗಳು ಹೊಯ್ಸಳರಿಗೆ ಸೇರಿವೆ. ಹೊಯ್ಸಳ ವಿಷ್ಣುವರ್ಧನ ಚೋಳರಸನು ಮತ್ತು ನೊಳಂಬರನ್ನು ಸೋಲಿಸಿ ಅವರ ಕೈಯಲ್ಲಿದ್ದ ಸಂಪೂರ್ಣ ನಾಡನ್ನು ತನ್ನ ವಶಕ್ಕೆ ಪಡೆದುಕೊಂಡನು. ಕ್ರಿ.ಶ.1151 ರ ಹೊಯ್ಸಳರ ಕೈದಾಳು ಶಾಸನವು ವಿಷ್ಣುವರ್ಧನನ ಮಹಾಸಾಮಂತ ಮರುಗೆರೆ ನಾಡಪ್ರಭು ಗೂಳಿ ಬಾಬಿ ನಾಯಕನು ಮರಗೆರೆ ನಾಡಿನಲ್ಲಿ ಬೌದ್ಧ, ಜೈನ, ಶೈವ ಮತ್ತು ವೈಷ್ಣವ ದೇವಾಲಯಗಳನ್ನು ಕಟ್ಟಿಸಿರುವುದಾಗಿ ತಿಳಿದುಬರುತ್ತದೆ.

ಕ್ರಿ.ಶ.1286 ಕೊಡ್ಲಾಪುರ ಶಾಸನವು ಹೊಯ್ಸಳ ಚಕ್ರವರ್ತಿ ರಾಮನಾಥ ದೇವನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.[13] ಕ್ರಿ.ಶ.1328ರ ನಂತರ ಗ್ರಾಮದ ಶಾಸನದ ಪ್ರಕಾರ 3ನೇ ಬಲ್ಲಾಳನು ಮಹಾಸಾಯಿಕ ಪೊನ್ನಣ್ಣನವರ ಮಕ್ಕಳು ಕಾಮಣ್ಣನವರು ದೇವಗುಂಡನಾದ ಕೊಯೂರದ ಹೊದ್ದರಿಗೆಯ ಮಸಣಗೌಡನ ಮಗ ಚಿಕ್ಕಣ್ಣನಿಗೆ ಆ ನಾಡ ಒಳಗಣ ಬರಿಕನ ಕಲ್ಲನ್ನು ಕೊಡುಗೆಯಾಗಿ ನೀಡಿದ ಬಗ್ಗೆ ತಿಳಿದುಬರುತ್ತದೆ.

ಹೊಯ್ಸಳರ ನಂತರ ವಿಜಯನಗರದ ಅರಸರು ಕರ್ನಾಟಕದಲ್ಲಿ ಪ್ರಬಲ ರಾಜಕೀಯ ಶಕ್ತಿಗಳಾಗಿ ಏಳಿಗೆಗೆ ಬಂದಿದ್ದಾರೆ. ಮಧುಗಿರಿ ಮಹಾನಾಡ ಪ್ರಭುಗಳು ವಿಜಯನಗರ ಅರಸ್ದ ಸಮಕಾಲೀನರಾಗಿ ಅವರ ನಿಷ್ಠಾವಂತ ಅಧೀನ ಅರಸರಾಗಿ ಆಳ್ವಿಕೆ ನಡೆಸಿರುತ್ತಾರೆ. ವಿಜಯನಗರ ಅರಸರ ಕಾಲದ ಶಾಸನಗಳು ಸಹ ಮಧುಗಿರಿ ಮಹಾನಾಡಿನಲ್ಲಿ ಕಂಡುಬಂದಿದೆ.

ಮುಂದೆ ಮಧುಗಿರಿ ಮಹಾನಾಡು ಪ್ರಾಂತ್ಯವು ಮಹಾನಾಡ ಪ್ರಭುಗಳು ಈ ಭಾಗದಲ್ಲಿ ಏಳಿಗೆಗೆ ಬಂದರು. ಅದಕ್ಕೂ ಮೊದಲು ಬೇರೆ ಬೇರೆ ರಾಜಮನೆತನಗಳು ಆಳ್ವಿಕೆಗೆ ಒಳಪಟ್ಟು ತನ್ನದೇ ಆದ ಐತಿಹಾಸಿಕ ಮತ್ತು ಸಂಸ್ಕೃತಿ ಹಿನ್ನೆಲೆಯನ್ನು ಹೊಂದಿವೆ. ಇಂತಹ ಪರಿಸರದಲ್ಲಿ ಏಳಿಗೆಗೆ ಬಂದ ಮಧುಗಿರಿ ಮಹಾನಾಡು ಪ್ರಭುಗಳು ಈ ಕಾಲದಲ್ಲಿ ಕಾಣಿಸಿಕೊಂಡ ಹಲವಾರು ಪ್ರಾದೇಶಿಕ ಅರಸರಲ್ಲಿ ಪ್ರಮುಖರಾಗಿದ್ದಾರೆ.

ಮಹಾನಾಡ ಪ್ರಭುಗಳು ತಮ್ಮ ಆಳ್ವಿಕೆಯನ್ನು ಕ್ರಿ.ಶ.15–16ನೇ ಶತಮಾನದಲ್ಲಿಯೇ ಸ್ಥಾಪಿಸಿದ್ದಾರೆಂದು ತಿಳಿದುಬಂದಿದೆ. ಮಧುಗಿರಿ ಪ್ರಾಂತ್ಯದಲ್ಲಿ ಮಹಾನಾಡು ಪ್ರಭುಗಳಾಗಿ ಏಳಿಗೆಗೆ ಬಂದಿದ್ದಾರೆ. ಅವರು ಕ್ರಿ.ಶ.16–17ನೇ ಶತಮಾನದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದರು. ನಂತರ ಮೈಸೂರು ಒಡೆಯರ ಕಾಲದಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಅನೇಕ ಏಳುಬೀಳುಗಳನ್ನು ಎದುರಿಸಿದ್ದಾರೆ.

## ಅಡಿಟಿಪ್ಪಣಿಗಳು


1. ಚಂದ್ರಶೇಖರ್ ಎನ್. ಕ.ರೆ.ಸೇ. (ಸಂ) – ತುಮಕೂರು ಜಿಲ್ಲಾ ಗ್ಯಾಸೆಟಿಯರ್, ಪರಿಷ್ಕೃತ ಕನ್ನಡ ಆವೃತ್ತಿ, ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ, ಬೆಂಗಳೂರು, 2017, ಪು.ಸಂ.1087.
2. ಡಾ.ಆರ್.ಗೋಪಾಲ್ (ಸಂ) – ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2009, ಪು.ಸಂ.402.
3. ಶಿವತಾರಕ್ ಕೆ.ಬಿ. – ತುಮಕೂರು ಜಿಲ್ಲಾ ಪ್ರದೇಶದ ಹಳೆಯ ಶಿಲಾಯುಗ ಸಂಸ್ಕೃತಿ ಇತಿಹಾಸ ದರ್ಶನ (ಬೆಂಗಳೂರು), 1992, ಸಂಪುಟ–7, ಪು.ಸಂ.15.
4. ಎ.ಕ.ಸಂಪುಟ–16, ಮಧುಗಿರಿ – 119 (ಇಟ್ಟಗದಿಬ್ಬನಹಳ್ಳಿ)
5. ಎ.ಕ.ಸಂಪುಟ–12, ಮಧುಗಿರಿ – 99
6. ಎ.ಕ.ಸಂಪುಟ–12, ತುಮಕೂರು ಶಾಸನ ಸಂಖ್ಯೆ – 86 ಹಿರೇಗುಂಡಕಲ್ಲು
7. ಎ.ಕ.ಸಂಪುಟ–12, ಮಧುಗಿರಿ ಶಾಸನ ಸಂಖ್ಯೆ – 27
8. ಎ.ಕ.ಸಂಪುಟ–12, ಮಧುಗಿರಿ ಶಾಸನ ಸಂಖ್ಯೆ – 52
9. ಎ.ಕ.ಸಂಪುಟ–12, ಮಧುಗಿರಿ ಶಾಸನ ಸಂಖ್ಯೆ – 39
10. ಎ.ಕ.ಸಂಪುಟ–12, ಮಧುಗಿರಿ ಶಾಸನ ಸಂಖ್ಯೆ – 71
11. ಎ.ಕ.ಸಂಪುಟ–12, ಮಧುಗಿರಿ ಶಾಸನ ಸಂಖ್ಯೆಗಳು – 92, 93, 94, 97, 100, 101
12. ಎ.ಕ.ಸಂಪುಟ–12, ಮಧುಗಿರಿ – 118
13. ಎ.ಕ.ಸಂಪುಟ–12, ಮಧುಗಿರಿ ಶಾಸನ ಸಂಖ್ಯೆ – 47
14. ಎ.ಕ.ಸಂಪುಟ–12, ಮಧುಗಿರಿ ಶಾಸನ ಸಂಖ್ಯೆ – 3, 22 ಮತ್ತು 28.